**ದಿಃ 15.02.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ 1(ಎ) ಯಿಂದ (ಸಿ) ಪ್ರತಿವಾದಿ ಪರ ವಕೀಲರಿಂದಃ**

ಮೃತ 1ನೇ ಪ್ರತಿವಾದಿ ನನ್ನ ಗಂಡ. ಮೃತ ಅಕ್ಕವ್ವ ನನ್ನ ಅತ್ತೆ. ಮೃತ ಅಕ್ಕವ್ವರವರು ದಿಃ 23.08.1995 ರಂದು 1ನೇ ಪ್ರತಿವಾದಿಯವರಿಗೆ ವೀಲುನಾಮೆಯನ್ನು ಮಾಡಿರುತ್ತಾರೆ. ಸದರಿ ವೀಲುನಾಮೆ ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ವೀಲುನಾಮೆಯ ಎರಡು ಪುಟಗಳಲ್ಲಿ ನನ್ನ ಅತ್ತೆಯವರಾದ ಅಕ್ಕವ್ವರವರು ತಮ್ಮ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ನಿಡಿ-1 ವೀಲುನಾಮೆಯನ್ನು ಟಿ.ಆರ್.ಜಿ.ಆಚಾರ್ ರವರು ತಯಾರಿಸಿರುತ್ತಾರೆ. ನಿಡಿ-1 ವೀಲುನಾಮೆಗೆ ಕೆ.ಎ.ಪೆಮ್ಮಯ್ಯ ಮತ್ತು ಕೊಕ್ಕಲೆರ ಎಸ್. ಮಾದಪ್ಪ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ನಿಡಿ-1

ವೀಲುನಾಮೆಗೆ ನನ್ನ ಗಂಡನ ಸಹೋದರ-ಸಹೋದರಿಯರೂ ಕೂಡಾ ಸಹಿ ಮಾಡಿರುತ್ತಾರೆ. ನನ್ನ ಗಂಡನ 2 ನೇ ಸಹೋದರನಾದ ತಿಮ್ಮಯ್ಯರವರು ಆ ಸಮಯದಲ್ಲಿ ಮೃತಪಟ್ಟಿದ್ದರಿಂದ ಅವರ ಹೆಂಡತಿ ಕೆ.ಪಿ.ಗೌರಮ್ಮ ಮತ್ತು ಮಗನಾದ ಸೋಮಣ್ಣರವರೂ ಕೂಡಾ ಸಹಿ ಮಾಡಿರುತ್ತಾರೆ. ನನ್ನ ಗಂಡನ ಸಹೋದರರಾದ ಗಣಪತಿ ಮತ್ತು ಬೆಳ್ಳಪ್ಪರವರು ಮೃತಪಟ್ಟಿರುತ್ತಾರೆ. ಅದೇ ರೀತಿ ತಿಮ್ಮಯ್ಯರವರ ಹೆಂಡತಿ ಮತ್ತು ಮಗನಾದ ಕೆ.ಪಿ.ಗೌರಮ್ಮ ಮತ್ತು ಸೋಮಣ್ಣರವರೂ ಕೂಡಾ ಮೃತಪಟ್ಟಿರುತ್ತಾರೆ. ನನ್ನ ಗಂಡನ ಸಹೋದರಿಯಾದ ಕೆ.ಎ.ಲೀಲಾವತಿ ಈ ದಾವೆಯ ವಾದಿಯಾಗಿರುತ್ತಾರೆ. ಸದರಿಯವರೂ ಕೂಡಾ ನಿಡಿ-1 ಕ್ಕೆ ಒಪ್ಪಿಗೆ ನೀಡಿ ಸಹಿ ಮಾಡಿರುತ್ತಾರೆ.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.